

# ರಾಮಕೃಷ್ಣ ಮಹಾಸಂಘದ ಅಕ್ಟೋಬರ್ ತಿಂಗಳ ಚಟುವಟಿಕೆಗಳು

**ದುರ್ಗಾಪೂಜೆ:** ಅಕ್ಟೋಬರ್ ೧೬ರಿಂದ ೧೯ರ ವರೆಗೆ **ಬೇಲೂರು ಮಠ** ಹಾಗೂ ಮಹಾಸಂಘದ ವಿವಿಧ ಕೇಂದ್ರಗಳಲ್ಲಿ ದುರ್ಗಾಪೂಜೆಯನ್ನು ವಿವಿಧ ಸಡಗರ, ಸಂಭ್ರಮಗಳಿಂದ ಆಚರಿಸಲಾಯಿತು. ಬೇಲೂರು ಮಠದಲ್ಲಿ ೧೭ರಂದು ಕುಮಾರಿ ಪೂಜೆ, ಸಂಧಿಪೂಜೆ ನಡೆಯಿತು. ಅಷ್ಟಮಿಯಂದು ಸುಮಾರು ೫೭,೦೦೦ ಮಂದಿ ಪ್ರಸಾದ ಭೋಜನ ಸ್ವೀಕರಿಸಿದರು. ಒಟ್ಟು ನಾಲ್ಕು ದಿನಗಳಲ್ಲಿ ಸುಮಾರು ಒಂದೂವರೆ ಲಕ್ಷ ಜನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಇತರ ಶಾಖಾಕೇಂದ್ರಗಳಲ್ಲಿ ೨೬ ಕೇಂದ್ರಗಳು ಮೂರ್ತಿಸಮೇತ ದುರ್ಗಾಪೂಜೆಯನ್ನು ನೆರವೇರಿಸಿದವು.




**ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣದ ೧೨೫ನೇ ವಾರ್ಷಿಕೋತ್ಸವ:** ರಾಮಕೃಷ್ಣ ಮಿಷನ್ ಸೇವಾಶ್ರಮ, **ಸಿಲ್‌ಚಾರ್** ಕೇಂದ್ರವು ಚಿಕಾಗೋ ಭಾಷಣದ ೧೨೫ನೇ ವಾರ್ಷಿಕೋತ್ಸವದ ಅಂಗವಾಗಿ ಅಕ್ಟೋಬರ್ ೧೯ರಿಂದ ೨೭ರ ವರೆಗೆ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಿತ್ತು. ಇದರಲ್ಲಿ ಪ್ರವಚನ ಹಾಗೂ ಭಾಷಣಗಳು ಸೇರಿದ್ದವು. ಅಮೆರಿಕದ **ಚಿಕಾಗೋ** ಕೇಂದ್ರವು ಗ್ಯಾಂಜಸ್‌ನಲ್ಲಿರುವ ವಿವೇಕಾನಂದ ರಿಟ್ರೀಟ್‌ನಲ್ಲಿ 'ವೇದಾಂತ' ಎಂಬ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಇದರಲ್ಲಿ ೪೦೦ ಮಂದಿ ಭಾಗವಹಿಸಿದ್ದರು.

### ಸೋದರಿ ನಿವೇದಿತಾ ಅವರ ೧೫೦ನೇ ಜನ್ಮ ಮಹೋತ್ಸವ

**ಕೊಯಮತ್ತೂರು ಮಿಷನ್ ವಿದ್ಯಾಲಯವು** ೨೦೧೭ರ ಅಕ್ಟೋಬರ್‌ನಿಂದ ೨೦೧೮ರ ಸೆಪ್ಟೆಂಬರ್ ತನಕ ಅಂತರ್ಜಾಲ ರಸಪ್ರಶ್ನೆ ಸ್ಪರ್ಧೆಯನ್ನು ಏರ್ಪಡಿಸಿತ್ತು. ಇದರಲ್ಲಿ ೯ ಕಾಲೇಜುಗಳ ೩೩೦೮ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

**ಇತರ ಚಟುವಟಿಕೆಗಳು:** **ವಿಶಾಖಪಟ್ಟಣಂ** ಕೇಂದ್ರವು ನಡೆಸುತ್ತಿರುವ ಪ್ರೌಢಶಾಲೆಯ ವಜ್ರಮಹೋತ್ಸವವು ಅಕ್ಟೋಬರ್ ೨ ರಿಂದ ೭ರ ತನಕ ನಡೆಯಿತು. ಇದರಲ್ಲಿ ಸಾರ್ವಜನಿಕ ಸಭೆ, ಅಧ್ಯಾಪಕರ ಸಮ್ಮೇಳನ, ಹಳೆಯ ವಿದ್ಯಾರ್ಥಿಗಳ ಸಭೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. **ಶ್ಯಾಮಪುಕುರ ಬಾಟಿಯಲ್ಲಿರುವ** ರಾಮಕೃಷ್ಣ ಮಠವು ಸಮೀಪದಲ್ಲಿರುವ ನಾಲ್ಕು ಮಹಡಿ ಕಟ್ಟಡವನ್ನು ಹೆಚ್ಚಿನ ಕಾರ್ಯಚಟುವಟಿಕೆಗಳಿಗಾಗಿ ಖರೀದಿಸಿದ್ದು, ಅದರ ಉದ್ಘಾಟನೆಯು ಅಕ್ಟೋಬರ್ ೩ ರಂದು ನಡೆಯಿತು. **ಪುರುಲಿಯಾ ವಿದ್ಯಾಪೀಠವು** ಒಂದು ವರ್ಷದ ಅವಧಿಯಷ್ಟು ದೀರ್ಘಕಾಲ ನಡೆದ ವಜ್ರಮಹೋತ್ಸವದ ಸಮಾರೋಪ ಸಮಾರಂಭವನ್ನು ಅಕ್ಟೋಬರ್ ೫ರಿಂದ ೧೦ರ ತನಕ ನಡೆಸಿತು. ಸಾರ್ವಜನಿಕ ಸಭೆ, ಹಳೆ ವಿದ್ಯಾರ್ಥಿಗಳ ಸಭೆ, ಸಾಂಸ್ಕೃತಿಕ ಸ್ಪರ್ಧೆ, ವಿಚಾರ ಸಂಕಿರಣ, ವಸ್ತುಪ್ರದರ್ಶನ, ನಾಟಕ, ಸಂಗೀತ ಇತ್ಯಾದಿ ಕಾರ್ಯುಕ್ರಮಗಳು ನಡೆದವು. **ಅಗರ್ತಲಾ** ಕೇಂದ್ರವು ಅಕ್ಟೋಬರ್ ೪ರಂದು ರಕ್ತದಾನ ಶಿಬಿರವನ್ನು ನೆರವೇರಿಸಿತು. **ಕೊಯಮತ್ತೂರು ಮಿಷನ್ ವಿದ್ಯಾಲಯವು** ಸೆಪ್ಟೆಂಬರ್ ೨೮ ರಿಂದ ೩೦ರ ವರೆಗೆ ರಾಜ್ಯ ಮಟ್ಟದ ಬಾಸ್ಕೆಟ್‌ಬಾಲ್ ಕ್ರೀಡಾಕೂಟವನ್ನು ನೆರವೇರಿಸಿದರು. **ರಾಮ ಹರಿಪುರ** ಕೇಂದ್ರವು ಅಕ್ಟೋಬರ್ ೨ ರಂದು ವೈದ್ಯಕೀಯ ಶಿಬಿರವನ್ನು ನಡೆಸಿತು.

**ಸ್ವಚ್ಛ ಭಾರತ ಅಭಿಯಾನ:** **ಕೊಯಮತ್ತೂರು ಮಿಷನ್ ವಿದ್ಯಾಲಯವು** ಹಾಗೂ **ಕಾಮಾರಪುಕುರ** ಕೇಂದ್ರಗಳು ಸ್ವಚ್ಛ ಭಾರತ ಅಭಿಯಾನದ ಅಂಗವಾಗಿ ಕೇಂದ್ರದ ಸುತ್ತಮುತ್ತಣ ಪ್ರದೇಶಗಳಲ್ಲಿ ಸ್ವಚ್ಛ ಕಾರ್ಯಕ್ರಮಗಳನ್ನು ನಡೆಸಿದವು.

### ವಿದೇಶೀ ಕೇಂದ್ರಗಳಲ್ಲಿ

**ದುರ್ಗಾಪೂಜೆ:** ದಕ್ಷಿಣ ಆಫ್ರಿಕಾದ **ಡರ್ಬನ್,** ಝಾಂಬಿಯಾದ **ಲುಸಾಕ,** ಬಾಂಗ್ಲಾದೇಶದ ೧೧ ಕೇಂದ್ರಗಳಲ್ಲಿ ದುರ್ಗಾಪೂಜೆ ಉತ್ಸವ ನಡೆಯಿತು. **ಡರ್ಬನ್** ಕೇಂದ್ರದಲ್ಲಿ ಸಾಧುನಿವಾಸದ ಹೊಸ ವಿಸ್ತರಣೆಯನ್ನು ಉದ್ಘಾಟಿಸಲಾಯಿತು. **ಚಿಕಾಗೋ** ಕೇಂದ್ರದ ಗ್ಯಾಂಜಸ್ ರಿಟ್ರೀಟ್‌ನಲ್ಲಿ ದಿವ್ಯತ್ರಯರ ಹೊಸ ಮೂರ್ತಿಗಳನ್ನು ಸ್ಥಾಪಿಸಲಾಯಿತು. ಬಾಂಗ್ಲಾದೇಶದ **ಚಾಂದ್‌ಪುರ್** ಕೇಂದ್ರದಲ್ಲಿ ಅಕ್ಟೋಬರ್ ೫ ರಂದು ಬಾಂಗ್ಲಾದೇಶಕ್ಕೆ ಭಾರತದ ರಾಯಭಾರಿಯಾಗಿರುವ ಹರ್ಷವರ್ಧನ್ ಶ್ರಿಂಗ್ಲಾ ಅವರು ಹೊಸದಾಗಿ ನಿರ್ಮಿಸಿದ ವಿವೇಕಾನಂದ ಭವನ ಹಾಗೂ ಬ್ರಹ್ಮಾನಂದ ಭವನವನ್ನು ಉದ್ಘಾಟಿಸಿದರು.




ವಜ್ರಮಹೋತ್ಸವ, ಪುರುಲಿಯಾ ವಿದ್ಯಾಪೀಠ




ವಜ್ರಮಹೋತ್ಸವ, ವಿಶಾಖಪಟ್ಟಣಂ



ಕ್ರೀಡಾಕೂಟ, ಕೊಯಮತ್ತೂರು

Managing Editor : Swami Atmajnananda Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020